## ಕರ್ನಾಟಕ ಸರ್ಕಾರ

ಸಂಖ್ಯೆ: ಕಾಶಿಇ/86/ನಿವೃತ್ತಿ2018/ಸಿಆರ್2/2017-18

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:17-05-2017

## ಸುತ್ತೋಲೆ

ವಿಷಯ: 2018ನೇ ಕ್ಯಾಲೆಂಡರ್ ವರ್ಷದಲ್ಲಿ ನಿವೃತ್ತಿ ಹೊಂದಲಿರುವ **ಖಾಸಗಿ ಅನುದಾನಿತ ಕಾಲೇಜುಗಳ** ಬೋಧಕ ಮತ್ತು ಬೋಧಕೇತರ ನೌಕರರುಗಳ ವಿವರಗಳನ್ನು ಕಳುಹಿಸುವ ಬಗ್ಗೆ.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ ತಿಳಿಸುವುದೇನೆಂದರೆ ತಮ್ಮ ಕಛೇರಿ ವ್ಯಾಪ್ತಿಯಲ್ಲಿ ಬರುವ **ಖಾಸಗಿ ಅನುದಾನಿತ (ಪದವಿ, ಕಾನೂನು ಹಾಗೂ ಬಿ.ಎಡ್) ಕಾಲೇಜುಗಳಲ್ಲಿ** ದಿನಾಂಕ: 01-01-2018 ರಿಂದ 31-12-2018ರ ಕ್ಯಾಲೆಂಡರ್ ಅವಧಿಯಲ್ಲಿ ವಯೋನಿವೃತ್ತಿ ಹೊಂದಲಿರುವ ಅನುದಾನಿತ ಬೋಧಕ ಮತ್ತು ಬೋಧಕೇತರ ವರ್ಗದ ನೌಕರರುಗಳ ವಿವರಗಳನ್ನು ಪ್ರತ್ಯೇಕವಾಗಿ ಈ ಸುತ್ತೋಲೆಯೊಂದಿಗೆ ಲಗತ್ತಿಸಿ ಕಳುಹಿಸಿರುವ ನಮೂನೆಯಲ್ಲಿ ಕಾಲೇಜು ಪ್ರಾಂಶುಪಾಲರುಗಳಿಂದ ಪಡೆದು ಕ್ರೋಢೀಕರಿಸಿ ದಿನಾಂಕ: 30-06-2017ರೊಳಗೆ ಈ ಕಛೇರಿಗೆ ಕಳುಹಿಸಬೇಕೆಂದು ನಿರ್ದೇಶಿಸಲಾಗಿದೆ.

1. ನಿವೃತ್ತಿ ಹೊಂದುತ್ತಿರುವವರ ಜನ್ಮ ದಿನಾಂಕವನ್ನು ತಮ್ಮ ಕಛೇರಿಯಲ್ಲಿ ಲಭ್ಯವಿರುವ ದಾಖಲಾತಿಗಳೊಂದಿಗೆ ಖುದ್ದಾಗಿ ಪರಿಶೀಲಿಸಿ, ದೃಢೀಕರಿಸಿ ಮಾಹಿತಿಗಳನ್ನು ಕಳುಹಿಸುವುದು.
2. ಯಾರೂ ನಿವೃತ್ತಿ ಹೊಂದದೆ ಇರುವ ಪಕ್ಷದಲ್ಲಿ ಕಳುಹಿಸಿರುವ ನಮೂನೆಯಲ್ಲಿ "ಶೂನ್ಯ ವರದಿ" ಎಂದು ನಮೂದಿಸಿ ಕಳುಹಿಸಬೇಕೆಂದು ಕಟ್ಟುನಿಟ್ಟಾಗಿ ತಿಳಿಸಿದೆ.
3. **ಪ್ರಾಂಶುಪಾಲರು ಹಾಗೂ ಉಪನ್ಯಾಸಕರುಗಳ ಬೋಧನಾ ವಿಷಯವನ್ನು ಕಡ್ಡಾಯವಾಗಿ ನಮೂದಿಸಬೇಕು.**
4. ನಿವೃತ್ತರಾಗುವ ಸಿಬ್ಬಂದಿಗಳ ನಿವೃತ್ತಿ ದಿನಾಂಕದ ಜೇಷ್ಠತೆಯನ್ನು ಅನುಸರಿಸಿ ನಿವೃತ್ತಿ ದಿನಾಂಕ ನಮೂದಿಸಿರಬೇಕು (Monthwise) ಹಾಗೂ ನಮೂನೆಯಲ್ಲಿ ಬೋಧಕರ ವಿವರ ಪಟ್ಟಿ ಹಾಗೂ ಬೋಧಕೇತರರ ವಿವರ ಪಟ್ಟಿಯನ್ನು (Separate List of Teaching & Non Teaching) ಪ್ರತ್ಯೇಕವಾಗಿ ಬೇರೆ ಬೇರೆ ನಮೂನೆಗಳಲ್ಲಿ ನಮೂದಿಸಿ ಎರಡು ಪಟ್ಟಿಗಳನ್ನು ತಯಾರಿಸಿ ಕಳುಹಿಸಬೇಕೆಂದು ಕಟ್ಟುನಿಟ್ಟಾಗಿ ತಿಳಿಸಲಾಗಿದೆ. ಮುಂದುವರೆದು ನಿವೃತ್ತಿ ದಿನಾಂಕಗಳನ್ನು 01-01-2018 ಮಾದರಿಯಲ್ಲೇ(ಉದಾ ಚಿಹ್ನೆ: . , / ಉಪಯೋಗಿಸಬಾರದು) ಮತ್ತು ವಿವರಗಳನ್ನು ಕನ್ನಡದಲ್ಲಿಯೇ ಕಡ್ಡಾಯವಾಗಿ ನಮೂದಿಸಬೇಕು.
5. ಪಿಂಚಣಿ ವಿಭಾಗದ ಇ-ಮೇಲ್ ಐಡಿ dce.pension@gmail.comಗೆ ಸಾಫ್ಟ್ ಕಾಪಿಯನ್ನು ಈ ಪತ್ರದೊಂದಿಗೆ ಲಗತ್ತಿಸಲಾದ ನಮೂನೆಯಲ್ಲಿ MS excel ತಂತ್ರಾಂಶದಲ್ಲಿ ಹಾಗೂ ಮುದ್ರಿತ ಪ್ರತಿಯನ್ನು ಕೂಡಾ ಕಳುಹಿಸಲು ತಿಳಿಸಲಾಗಿದೆ.

ಅಡಕ: ನಮೂನೆ

ಕಾಲೇಜು ಶಿಕ್ಷಣ ನಿರ್ದೇಶಕರು(ಪ್ರ)

ಇವರಿಗೆ:

1. ಪ್ರಾದೇಶಿಕ ಜಂಟಿ ನಿರ್ದೇಶಕರುಗಳು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಮಂಗಳೂರು, ಕಲಬುರಗಿ, ಶಿವಮೊಗ್ಗ ಹಾಗೂ ಧಾರವಾಡ – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
2. ಎಲ್ಲಾ ಖಾಸಗಿ ಅನುದಾನಿತ ಪದವಿ, ಬಿಎಡ್ ಹಾಗೂ ಕಾನೂನು ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ತಮ್ಮ **ಕಾಲೇಜಿನಲ್ಲಿ ನಿವೃತ್ತಿ ಹೊಂದಲಿರುವ ಸಿಬ್ಬಂದಿ ವರ್ಗದವರ ಬಗ್ಗೆ ಮಾಹಿತಿಯನ್ನು ನಿಗದಿತ ನಮೂನೆಯಲ್ಲಿ ದಿನಾಂಕ:10-06-2017ರೊಳಗಾಗಿ ಸಂಬಂಧಿಸಿದ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ ಮಾತ್ರ ಕಳುಹಿಸಲು ಕಟ್ಟುನಿಟ್ಟಾಗಿ ಸೂಚಿಸಲಾಗಿದೆ.**
3. ಮಾಹಿತಿ ಅಧಿಕಾರಿಗಳು, ಕೇಂದ್ರ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು – ಸದರಿ ಸುತ್ತೋಲೆಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.
4. ಹೆಚ್ಚುವರಿ ಪ್ರತಿ.
5. ಕಛೇರಿ ಪ್ರತಿ.

## ಕಾಲೇಜು ಶಿಕ್ಷಣ ಇಲಾಖೆ

### ಸರ್ಕಾರಿ/ ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ 2018ನೇ ಕ್ಯಾಲೆಂಡರ್ ವರ್ಷದಲ್ಲಿ ವಯೋನಿವೃತ್ತಿ ಹೊಂದಲಿರುವ ಬೋಧಕ/ಬೋಧಕೇತರ ಸಿಬ್ಬಂದಿಯವರ ವಿವರಗಳು (ಪ್ರತ್ಯೇಕವಾಗಿ)

| ಕ್ರಮ ಸಂಖ್ಯೆ | ಹೆಸರು ಶ್ರೀ/ ಶ್ರೀಮತಿ | ಪದನಾಮ | ವಿಷಯ | ಕಛೇರಿ/ಕಾಲೇಜಿನ ಹೆಸರು ಮತ್ತು ಸ್ಥಳ | ಜನ್ಮ ದಿನಾಂಕ | ಸೇವೆಗೆ ಸೇರಿದ ದಿನಾಂಕ | 2018ನೇ ಕ್ಯಾಲೆಂಡರ್ ವರ್ಷದಲ್ಲಿ ವಯೋನಿವೃತ್ತಿ ಹೊಂದಲಿರುವ ದಿನಾಂಕ | ಷರಾ |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |
| | | | | | | | | |

**ದೃಢೀಕರಣ:** ಮೇಲ್ಕಂಡ ಸಿಬ್ಬಂದಿಯವರ ಜನ್ಮ ದಿನಾಂಕವನ್ನು ಅವರ ಮೂಲ ಸೇವಾ ಪುಸ್ತಕದ ಅಥವಾ ಎಸ್.ಎಸ್.ಎಲ್.ಸಿ. ಅಂಕಪಟ್ಟಿಯಲ್ಲಿ ನಮೂದಾಗಿರುವ ಜನ್ಮ ದಿನಾಂಕದೊಂದಿಗೆ ತಾಳೆ ಮಾಡಿ ಸರಿಯಾಗಿದೆ ಎಂದು ದೃಢೀಕರಿಸಿರುತ್ತೇನೆ

ಪ್ರಾಂಶುಪಾಲರು

**ಕರ್ನಾಟಕ ಸರ್ಕಾರ**

ಸಂಖ್ಯೆ: ಕಾಶಿಇ/85/ನಿವೃತ್ತಿ2018/ಸಿಆರ್2/2017-18

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು. ದಿನಾಂಕ:17-05-2017

**ಸುತ್ತೋಲೆ**

ವಿಷಯ: 2018ನೇ ಕ್ಯಾಲೆಂಡರ್ ವರ್ಷದಲ್ಲಿ ವಯೋನಿವೃತ್ತಿ ಹೊಂದಲಿರುವ ಬೋಧಕ ಮತ್ತು ಬೋಧಕೇತರ ನೌಕರರುಗಳ ವಿವರಗಳನ್ನು ಕಳುಹಿಸುವ ಬಗ್ಗೆ.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಎಲ್ಲಾ **ಸರ್ಕಾರಿ ಕಾಲೇಜು ಹಾಗೂ ಕಾನೂನು ಕಾಲೇಜುಗಳ** ಪ್ರಾಂಶುಪಾಲರುಗಳು ಮತ್ತು ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ ತಿಳಿಸುವುದೇನೆಂದರೆ ಕರ್ನಾಟಕ ನಾಗರೀಕ ಸೇವಾ ನಿಯಮ 96(2)ರ ಪ್ರಕಾರ ದಿನಾಂಕ:01-01-2018 ರಿಂದ 31-12-2018ನೇ ಕ್ಯಾಲೆಂಡರ್ ಅವಧಿಯಲ್ಲಿ ವಯೋನಿವೃತ್ತಿ ಹೊಂದಲಿರುವ ಬೋಧಕ ಮತ್ತು ಬೋಧಕೇತರ ವರ್ಗದ ನೌಕರರುಗಳ ವಿವರಗಳನ್ನು ಪ್ರತ್ಯೇಕವಾಗಿ ಪಿಂಚಣಿ, ಸಣ್ಣ ಉಳಿತಾಯ ಮತ್ತು **ಆಸ್ತಿ-ಋಣ** ನಿರ್ವಹಣೆ ಇಲಾಖೆಗೆ ತುರ್ತಾಗಿ ಕಳುಹಿಸಬೇಕಾಗಿರುತ್ತದೆ. ಈ ಸುತ್ತೋಲೆಯೊಂದಿಗೆ ಲಗತ್ತಿಸಿ ಕಳುಹಿಸಿರುವ ನಮೂನೆಯಲ್ಲಿ ಈ ಕೆಳಕಂಡ ಮಾಹಿತಿಗಳನ್ನು ದಿನಾಂಕ:30-06-2017ರೊಳಗೆ ಅಂಚೆ ಮೂಲಕ ತಲುಪಿಸತಕ್ಕದ್ದು.

1. ನಿವೃತ್ತಿ ಹೊಂದಲಿರುವ ನೌಕರರುಗಳ ಜನ್ಮ ದಿನಾಂಕ ಹಾಗೂ ಮಾಹಿತಿಗಳನ್ನು ತಪ್ಪಾಗಿ ಕಳುಹಿಸಿ ಕೊಡುತ್ತಿರುವುದರಿಂದ ನೌಕರರ ಅಧಿಸೂಚನೆ ಹೊರಡಿಸುವ ಸಂದರ್ಭದಲ್ಲಿ ನೌಕರರ ಜನ್ಮ ದಿನಾಂಕ ಹಾಗೂ ಇತರೆ ಮಾಹಿತಿಗಳು ತಪ್ಪಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಆದುದರಿಂದ ಕೂಲಂಕುಷವಾಗಿ ಪರಿಶೀಲಿಸಿ ನಿಖರವಾದ/ ಸ್ಪಷ್ಟ ಮಾಹಿತಿ ಕಳುಹಿಸಲು ನಿರ್ದೇಶಿಸಿದೆ.
2. **ನಿವೃತ್ತಿ ಹೊಂದುತ್ತಿರುವವರ ಜನ್ಮ ದಿನಾಂಕವನ್ನು ಸೇವಾ ಪುಸ್ತಕ ಅಥವಾ ಇತರೆ ದಾಖಲಾತಿಗಳೊಂದಿಗೆ ಪ್ರಾಂಶುಪಾಲರು ಖುದ್ದಾಗಿ ಪರಿಶೀಲಿಸಿ, ದೃಢೀಕರಿಸಿ ಮಾಹಿತಿಗಳನ್ನು ಕಳುಹಿಸುವುದು.**
   (ಒಂದು ವೇಳೆ ತಪ್ಪಾಗಿ ಮಾಹಿತಿಗಳನ್ನು ನೀಡಿದಲ್ಲಿ ಸಂಬಂಧಿಸಿದ ಜಂಟಿ ನಿರ್ದೇಶಕರು, ಪ್ರಾಂಶುಪಾಲರು ಹಾಗೂ ಸಂಬಂಧಪಟ್ಟ ಅಧೀಕ್ಷಕರು, ವಿಷಯ ನಿರ್ವಾಹಕರುಗಳನ್ನು ಮುಂದಿನ ಆಗುಹೋಗುಗಳಿಗೆ ಪೂರ್ಣ ಜವಾಬ್ದಾರರನ್ನಾಗಿ ಮಾಡಲಾಗುವುದು)
3. ಕಾಲೇಜಿನಲ್ಲಿ/ಕಛೇರಿಯಲ್ಲಿ ಯಾರೂ ನಿವೃತ್ತಿ ಹೊಂದದೆ ಇರುವ ಪಕ್ಷದಲ್ಲಿ ಕಳುಹಿಸಿರುವ ನಮೂನೆಯಲ್ಲಿ **"ಶೂನ್ಯ ವರದಿ"** ಎಂದು ನಮೂದಿಸಿ ಕಳುಹಿಸಬೇಕೆಂದು ಕಟ್ಟುನಿಟ್ಟಾಗಿ ತಿಳಿಸಿದೆ.
4. ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿರುವವರ ಬಗ್ಗೆಯೂ ಮಾಹಿತಿ ಸಲ್ಲಿಸುವುದು.
5. **ಪ್ರಾಂಶುಪಾಲರುಗಳ ಹಾಗೂ ಉಪನ್ಯಾಸಕರುಗಳ ಬೋಧನಾ ವಿಷಯವನ್ನು ಕಡ್ಡಾಯವಾಗಿ ನಮೂದಿಸಬೇಕು.**
6. ನಿವೃತ್ತರಾಗುವ ಸಿಬ್ಬಂದಿಗಳ ನಿವೃತ್ತಿ ದಿನಾಂಕದ ಜೇಷ್ಠತೆಯನ್ನು ಅನುಸರಿಸಿ ನಿವೃತ್ತಿ ದಿನಾಂಕ ನಮೂದಿಸಿರಬೇಕು (Monthwise) ಹಾಗೂ ನಮೂನೆಯಲ್ಲಿ ಬೋಧಕರ ವಿವರ ಪಟ್ಟಿ ಹಾಗೂ ಬೋಧಕೇತರರ ವಿವರ ಪಟ್ಟಿಯನ್ನು (Separate List of Teaching & Non Teaching) ಪ್ರತ್ಯೇಕವಾಗಿ ಬೇರೆ ಬೇರೆ ನಮೂನೆಗಳಲ್ಲಿ ನಮೂದಿಸಿ ಎರಡು ಪಟ್ಟಿಗಳನ್ನು ತಯಾರಿಸಿ ಕಳುಹಿಸಬೇಕೆಂದು ಕಟ್ಟುನಿಟ್ಟಾಗಿ ತಿಳಿಸಲಾಗಿದೆ. ಮುಂದುವರೆದು ದಿನಾಂಕಗಳನ್ನು 01-01-2018 ಮಾದರಿಯಲ್ಲೇ(ಉದಾ ಚಿಹ್ನೆ: ./. ಉಪಯೋಗಿಸಬಾರದು) ನಮೂದಿಸಬೇಕು.
7. ಪಿಂಚಣಿ ವಿಭಾಗದ ಇ-ಮೇಲ್ ಐಡಿ dce.pension@gmail.comಗೆ ಸಾಫ್ಟ್ ಕಾಪಿಯನ್ನು ಈ ಪತ್ರದೊಂದಿಗೆ ಲಗತ್ತಿಸಲಾದ ನಮೂನೆಯಲ್ಲಿ MS excel ತಂತ್ರಾಂಶದಲ್ಲಿ ಹಾಗೂ ಮುದ್ರಿತ ಪ್ರತಿಯನ್ನು ಕೂಡಾ ಕಳುಹಿಸಲು ತಿಳಿಸಲಾಗಿದೆ.

**ಅಡಕ: ನಮೂನೆ**

ಕಾಲೇಜು ಶಿಕ್ಷಣ ನಿರ್ದೇಶಕರು(ಪ್ರ)

ಇವರಿಗೆ:

1. ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಮತ್ತು ಕಾನೂನು ಕಾಲೇಜುಗಳ ಪ್ರಾಂಶುಪಾಲರುಗಳಿಗೆ – (ಅಗತ್ಯ ಕ್ರಮಕ್ಕಾಗಿ).
2. ಪ್ರಾದೇಶಿಕ ಜಂಟಿ ನಿರ್ದೇಶಕರುಗಳು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಮಂಗಳೂರು, ಕಲಬುರಗಿ, ಶಿವಮೊಗ್ಗ ಹಾಗೂ ಧಾರವಾಡ – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
3. ಮಾಹಿತಿ ಅಧಿಕಾರಿಗಳು, ಕೇಂದ್ರ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು – ಸದರಿ ಸುತ್ತೋಲೆಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ತಿಳಿಸಲಾಗಿದೆ.
4. ಹೆಚ್ಚುವರಿ ಪ್ರತಿ.
5. ಕಛೇರಿ ಪ್ರತಿ

## ಕಾಲೇಜು ಶಿಕ್ಷಣ ಇಲಾಖೆ

ಸರ್ಕಾರಿ/ ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ 2018ನೇ ಕ್ಯಾಲೆಂಡರ್ ವರ್ಷದಲ್ಲಿ ವಯೋನಿವೃತ್ತಿ ಹೊಂದಲಿರುವ ಬೋಧಕ/ಬೋಧಕೇತರ ಸಿಬ್ಬಂದಿಯವರ ವಿವರಗಳು (ಪ್ರತ್ಯೇಕವಾಗಿ)

| ಕ್ರಮ ಸಂಖ್ಯೆ | ಹೆಸರು ಶ್ರೀ/ ಶ್ರೀಮತಿ | ಪದನಾಮ | ವಿಷಯ | ಕಛೇರಿ/ಕಾಲೇಜಿನ ಹೆಸರು ಮತ್ತು ಸ್ಥಳ | ಜನ್ಮ ದಿನಾಂಕ | ಸೇವೆಗೆ ಸೇರಿದ ದಿನಾಂಕ | 2018ನೇ ಕ್ಯಾಲೆಂಡರ್ ವರ್ಷದಲ್ಲಿ ವಯೋನಿವೃತ್ತಿ ಹೊಂದಲಿರುವ ದಿನಾಂಕ | ಷರಾ |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |
| | | | | | | | | |

<u>ದೃಢೀಕರಣ:</u> ಮೇಲ್ಕಂಡ ಸಿಬ್ಬಂದಿಯವರ ಜನ್ಮ ದಿನಾಂಕವನ್ನು ಅವರ ಮೂಲ ಸೇವಾ ಪುಸ್ತಕದ ಅಥವಾ ಎಸ್.ಎಸ್.ಎಲ್.ಸಿ. ಅಂಕಪಟ್ಟಿಯಲ್ಲಿ ನಮೂದಾಗಿರುವ ಜನ್ಮ ದಿನಾಂಕದೊಂದಿಗೆ ತಾಳೆ ಮಾಡಿ ಸರಿಯಾಗಿದೆ ಎಂದು ದೃಢೀಕರಿಸಿರುತ್ತೇನೆ

ಪ್ರಾಂಶುಪಾಲರು